**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 111/2021**

**ಪಿಡಬ್ಲೂ-7**

**ಸಿಡಬ್ಲೂ-9**

ಸಾಕ್ಷಿದಾರರ ಹೆಸರು - ವಂಜು @ ಗೌತಮ್

ತಂದೆಯ ಹೆಸರು - ಶಿವಣ್ಣೇಗೌಡ

ವಯಸ್ಸು - 34

ಕೆಲಸ - ವ್ಯವಹಾರ

ವಾಸ - ಕೆ.ಆರ್.ನಗರ

**ದಿನಾಂಕ 22.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಆರೋಪಿತರನ್ನು ನಾನು ನೋಡಿದ್ದೇನೆ ಆದರೆ ಪರಿಚಯ ಇರುವುದಿಲ್ಲ. ಚಾಸಾ 1 ನನಗೆ ಗೊತ್ತು ಆದರೆ ಪರಿಚಯವಿಲ್ಲ. ಆರೋಪಿತರು ಮತ್ತು ಚಾಸಾ 1 ರವರ ನಡುವೆ ಆದ ಗಲಾಟೆಯನ್ನು ನಾನು ನೋಡಿಲ್ಲ, ಯಾರು ಯಾರಿಗೆ ಹೊಡೆದರು ಎಂಬ ವಿಚಾರ ನನಗೆ ಗೊತ್ತಿಲ್ಲ. ನಾನು ಘಟನೆಯನ್ನು ಕಣ್ಣಾರೆ ನೋಡಿಲ್ಲ. ನಾನು ಘಟನೆಯನ್ನು ಕಣ್ಣಾರೆ ನೋಡಿದ್ದೇನೆ ಎಂದು ಪೋಲಿಸರಿಗೆ ಹೇಳಿಕೆ ನೀಡಿಲ್ಲ. ಆರೋಪಿತರ ಜೊತೆ ನಾನು ಈ ಹಿಂದೆ ಹೋಟೆಲ್ ಗೆ ಊಟಕ್ಕೆ ಹೋಗಿಲ್ಲ , ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಖಾಕಿ ಶರ್ಟ ನ್ನು ನಾನು ನೋಡಿಲ್ಲ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ**

ದಿಃ 02.06.2019 ರಂದು ರಾತ್ರಿ 10.30 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಸ್ನೇಹಿತರಾದ ಚೇತನ, ವಿನೋದ ಮತ್ತು ಆರೋಪಿತರ ಜೊತೆ ಕೆ.ಆರ್.ನಗರದ ಸಿಟಿಲೈಟ್ ಹೊಟೆಲ್ ಗೆ ಊಟಕ್ಕೆ ಹೋಗಿದ್ದೇವು ಎಂದರೆ ಸರಿಯಲ್ಲ. ಆರೋಪಿತರಿಬ್ಬರೂ ನನ್ನ ಸ್ನೇಹಿತರು ಎಂದರೆ ಸರಿಯಲ್ಲ. ಹೋಟೆಲ್ ಗೆ ಊಟಕ್ಕೆ ಹೋದಾಗ ಹೋಟೆಲ್ ನ ಮಾಲೀಕರು ಬೇಗ ಊಟ ಮಾಡಿ ರಾತ್ರಿ ಗಸ್ತು ಪೋಲಿಸರು ಬಂದರೆ ಹೋಟೆಲ್

ಮುಚ್ಚಿಸುತ್ತಾರೆ ಎಂದು ಹೇಳಿದರು ಎಂದರೆ ಸರಿಯಲ್ಲ. ಆಗ ನಾವು ಲೋಕಲ್ ಹುಡುಗರು ಬೇಗ ಊಟ ಮಾಡಿಕೊಡಿ ಎಂದು ಕೇಳಿದೆವು ಎಂದರೆ ಸರಿಯಲ್ಲ. ಸುಮಾರು 11 ರಿಂದ 11.10 ರ ಸಮಯದಲ್ಲಿ ಚಾಸಾ 1 ಮತ್ತು ಚಾಸಾ 2 ರವರು ಸದರಿ ಹೋಟೆಲ್ ಬಳಿ ಬಂದು ಹೋಟೆಲ್ ಮುಚ್ಚಿ ಈಗಾಗಲೇ ರಾತ್ರಿಯಾಗಿದೆ ನೀವು ಹೋಟೆಲ್ ತೆಗೆಯುವುದರಿಂದ ನಮಗೆ ತೊಂದರೆಯಾಗುತ್ತದೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಆಗ ನಾವು ಊಟ ಬಿಟ್ಟು ಹೊರಗಡೆ ಬಂದೆವು ಎಂದರೆ ಸರಿಯಲ್ಲ. ಆರೋಪಿತರು ಸಮಾನ ಉದ್ದೇಶದಿಂದ ಹೋಟೆಲ್ ನಿಂದ ಹೊರಗಡೆ ಬಂದು ಚಾಸಾ 1 ರವರಿಗೆ ನಮ್ಮ ದುಡ್ಡು ನಮ್ಮ ಖಾಸು ,ಎಷ್ಟು ಹೊತ್ತು ಆದರೂ ಊಟ ಮಾಡುತ್ತೇವೆ ನಾವು ಲೋಕಲ್ ಹುಡುಗರು ಇದನ್ನು ಕೇಳಲು ನೀನು ಯಾರು ಎಂದು ಅವಾಚ್ಯ ಶಬ್ದಗಳಿಂದ ಚಾಸಾ 1 ರವರನ್ನು ಬೈದು ಸಮವಸ್ತ್ರದಲ್ಲಿದ್ದ ಚಾಸಾ 1 ರವರೊಂದಿಗೆ ಕರ್ತವ್ಯಕ್ಕೆ ಅಡ್ಡಿಪಡಿಸಿ ಆರೋಪಿತರಿಬ್ಬರೂ ಚಾಸಾ 1 ರವರಿಗೆ ಕೈಗಳಿಂದ ಬಲಭುಜಕ್ಕೆ, ಬಲಗೈಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿಯಲ್ಲ. ಚಾಸಾ 1 ರವರು ಧರಿಸಿದ್ದ ಸಮವಸ್ತ್ರವನ್ನು ಆರೋಪಿತರು ಎಳೆದಾಡಿ ಹರಿದುಹಾಕಿರುತ್ತಾರೆ ಎಂದರೆ ಸರಿಯಲ್ಲ. ಆಗ ರಸ್ತೆಯಲ್ಲಿ ಹೋಗುತ್ತಿದ್ದ ಜನರು ಬಂದು ಜಗಳ ಬಿಡಿಸಿದರು ಎಂದರೆ ಸರಿಯಲ್ಲ. ರಾತ್ರಿ ಕರ್ತವ್ಯ ನಿರ್ವಹಿಸುತ್ತಿರುವ ಚಾಸಾ 1 ರವರಿಗೆ ಆರೋಪಿತರು ಕರ್ತವ್ಯಕ್ಕೆ ಅಡ್ಡಿಪಡಿಸಿ ಅವರ ಮೇಲೆ ಹಲ್ಲೆ ಮಾಡಿ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ದಿಃ 24.06.2019 ರಂದು ನಾನು ಪೋಲಿಸರಿಗೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸ.ಸ.ಅ ರವರ ಕೋರಿಕೆ ಮೇರೆಗೆ ಹೇಳಿಕೆಯನ್ನು ನಿಪಿ 8 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು.ಮಾ 1 ನ್ನೇ ಚಾಸಾ 1 ರವರು ಧರಿಸಿದ್ದರು ಎಂದರೆ ಸರಿಯಲ್ಲ. ಕೃತ್ಯವನ್ನು ಕಣ್ಣಾರೆ ಕಂಡಿದ್ದರೂ ಆರೋಪಿತರು ನನ್ನ ಸ್ನೇಹಿತರಾದ ಕಾರಣ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> -ಇರುವುದಿಲ್ಲ

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ